# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2247 |
| ಉತ್ತರಿಸಬೇಕಾದ ದಿನಾಂಕ: | : 26.03.2026 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

<table>
<tr><th>ಕ್ರ.ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಬಂದು ನೆಲೆಸಿದ್ದಾರೆಯೇ; ಕಾಫಿ ತೋಟದಲ್ಲಿರುವ ಕೂಲಿ ಕಾರ್ಮಿಕರ ಆಧಾರ್ ಕಾರ್ಡ್ ಅಥವಾ ಅವರ ಬಗ್ಗೆ ಸರ್ಕಾರದಿಂದ ಸೂಕ್ತ ತನಿಖೆಯಾಗಿದೆಯೇ; (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ನೆಲೆಸಿರುವ ತೋಟದ ಮಾಲೀಕರ ಹೆಸರು ಮತ್ತು ವಿಳಾಸದೊಂದಿಗೆ ನೀಡುವುದು)</td><td>ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಯಾರು ಸಹ ನೆಲೆಸಿರುವುದು ಕಂಡು ಬಂದಿರುವುದಿಲ್ಲ. ಅಂತಹ ಅಕ್ರಮ ವಲಸಿಗರು ಕಂಡುಬಂದಲ್ಲಿ ಕೂಡಲೇ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು.<br><br>ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ಹಾಗೂ ಎಲ್ಲಾ ಪೊಲೀಸ್ ಉಪಾಧೀಕ್ಷಕರ ನೇತೃತ್ವಗಳಲ್ಲಿ ಜಿಲ್ಲೆಯ ಎಲ್ಲಾ ಕಾಫೀ ತೋಟಗಳ ಮಾಲೀಕರಿಗೆ ಹಾಗೂ ಕಟ್ಟಡ ಗುತ್ತಿಗೆದಾರರಿಗೆ ಸೇರಿಸಿ ಅನ್ಯ ರಾಜ್ಯಗಳಿಂದ ರಾಜ್ಯಕ್ಕೆ ಬರುವ ವಲಸೆ ಕಾರ್ಮಿಕರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಇಡುವಂತೆ ಸೂಕ್ತ ಸೂಚನೆಗಳನ್ನು ನೀಡಲಾಗಿರುತ್ತದೆ ಮತ್ತು ವಲಸೆ ಕಾರ್ಮಿಕರ ಮಾಹಿತಿಗಳನ್ನು ದಾಖಲಿಸಿ ರಿಜಿಸ್ಟರ್‌ಗಳನ್ನು ನಿರ್ವಹಿಸುತ್ತಿರುತ್ತಾರೆ.</td></tr>
<tr><td>ಆ)</td><td>ಬಾಂಗ್ಲಾ ವಲಸಿಗರು ಅಕ್ರಮವಾಗಿ ರಾಜ್ಯಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಕ್ರಮವಾಗಿ ಅವರಿಗೆ ಆಧಾರ್ ಕಾರ್ಡ್ ಇನ್ನಿತರೆ ಸ್ಥಳೀಯ ದಾಖಲಾತಿಯನ್ನು ಮಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ; ಅಂತವರ ವಿರುದ್ಧ ದಾಖಲಾದ ಪ್ರಕರಣಗಳು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಅಕ್ರಮವಾಗಿ ನೆಲೆಸಿರುವುದು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 484 ಜನ ಅಕ್ರಮ ಬಾಂಗ್ಲಾದೇಶದ ವಲಸಿಗರನ್ನು ಪತ್ತೆ ಮಾಡಲಾಗಿರುತ್ತದೆ.<br><br>ಪತ್ತೆ ಮಾಡಲಾಗಿರುವ ಅಕ್ರಮ ಬಾಂಗ್ಲಾ ವಲಸಿಗರ ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th>ನಗರ ಮತ್ತು ಜಿಲ್ಲೆ</th><th>ಪತ್ತೆ ಮಾಡಲಾಗಿರುವ ಅಕ್ರಮ ಬಾಂಗ್ಲಾ ನುಸುಳುಕೋರರ ಸಂಖ್ಯೆ:</th><th>ಗಡಿಪಾರು ಮಾಡಲಾಗಿರುವ ಅಕ್ರಮ ಬಾಂಗ್ಲಾ ನುಸುಳುಕೋರರ ಸಂಖ್ಯೆ:</th></tr>
<tr><td>ಬೆಂಗಳೂರು ನಗರ</td><td>397</td><td>205</td></tr>
<tr><td>ಬೆಂಗಳೂರು ಜಿಲ್ಲೆ</td><td>37</td><td>25</td></tr>
<tr><td>ಚಿತ್ರದುರ್ಗ</td><td>06</td><td>06</td></tr>
<tr><td>ಧಾರವಾಡ</td><td>02</td><td>02</td></tr>
<tr><td>ಹಾಸನ</td><td>04</td><td>03</td></tr>
<tr><td>ಕೋಲಾರ</td><td>12</td><td>12</td></tr>
<tr><td>ಮಂಗಳೂರು ನಗರ</td><td>03</td><td>02</td></tr>
<tr><td>ಶಿವಮೊಗ್ಗ</td><td>12</td><td>12</td></tr>
</table></td></tr>
</table>

| | | |
|---|---|---|
| ತುಮಕೂರು | 01 | 01 |
| ಉಡುಪಿ | 10 | 00 |
| **ಒಟ್ಟು** | **484** | **268** |

ಅಕ್ರಮವಾಗಿ ಆಧಾರ್ ಕಾರ್ಡ್ ಇನ್ನಿತರೆ ಸ್ಥಳೀಯ ದಾಖಲಾತಿಗಳನ್ನು ಮಾಡುತ್ತಿರುವುದು ಗಮನಕ್ಕೆ ಬಂದಲ್ಲಿ ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅಂತಹವರ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 07 ಜನರ ವಿರುದ್ಧ 05 ಪ್ರಕರಣಗಳು ದಾಖಲಾಗಿರುತ್ತದೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ.

| **ನಗರ ಮತ್ತು ಜಿಲ್ಲೆ** | **ದಾಖಲಾಗಿರುವ ಪ್ರಕರಣಗಳ ಸಂಖ್ಯೆ** | **ಪ್ರಕರಣಗಳಲ್ಲಿ ಭಾಗಿಯಾಗಿರುವ ಅಕ್ರಮ ವಲಸಿಗರ ಆರೋಪಿಗಳ ಸಂಖ್ಯೆ** |
|---|---|---|
| ಬೆಂಗಳೂರು ನಗರ | 2 | 3 |
| ಬೆಂಗಳೂರು ಜಿಲ್ಲೆ | 1 | 1 |
| ಮಂಗಳೂರು ನಗರ | 1 | 2 |
| ಉಡುಪಿ | 1 | 1 |
| **ಒಟ್ಟು** | 5 | 7 |

ವಿವರವನ್ನು ಅನುಬಂಧ ದಲ್ಲಿ ನೀಡಲಾಗಿದೆ.

| | | |
|---|---|---|
| **ಇ)** | ಹೊರ ರಾಜ್ಯದಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫಿ ತೋಟಕ್ಕೆ ಸೇರಿ ತೋಟದ ಮಾಲೀಕರ (ಎಸ್ಟೇಟ್ ಮ್ಯಾನೇಜರ್ ಅಥವಾ ನೋಡಿಕೊಳ್ಳುವವರ) ಮೇಲೆ ಮಾರಣಾಂತಿಕ ಹಲ್ಲೆಯಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದಾಖಲಾದ ಪ್ರಕರಣಗಳು ಎಷ್ಟು; ಹಲ್ಲೆಗೊಳಗಾದವರ ಸಂಖ್ಯೆ ಎಷ್ಟು; ಮರಣ ಹೊಂದಿದವರ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ಹಲ್ಲೆಗೊಳಗಾದವರ ಹೆಸರು ದೂರವಾಣಿ ಸಂಖ್ಯೆ ಸಹಿತ ಮಾಹಿತಿ ನೀಡುವುದು) | ಹೊರ ರಾಜ್ಯದಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫೀ ತೋಟಕ್ಕೆ ಸೇರಿ ತೋಟದ ಮಾಲೀಕರ (ಎಸ್ಟೇಟ್ ಮ್ಯಾನೇಜರ ಅಥವಾ ನೋಡಿಕೊಳ್ಳುವವರ ಮೇಲೆ) ಮಾರಣಾಂತಿಕ ಹಲ್ಲೆಯಾದ ಪ್ರಕರಣಗಳು ದಾಖಲಾಗಿರುವುದಿಲ್ಲ. |

| | | |
|---|---|---|
| ಈ) | ಈ ಜಿಲ್ಲೆಗಳಲ್ಲಿ ಹೊರ ರಾಜ್ಯಗಳಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫಿ ತೋಟದಲ್ಲಿ ನೆಲೆಸಿರುವವರ ಸಂಪೂರ್ಣ ದಾಖಲಾತಿಗಳು ಸ್ಥಳೀಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇದೆಯೇ; (ಅವರ ಭಾವಚಿತ್ರ ಆಧಾರ್ ಒಳಗೊಂಡಂತೆ) ಪ್ರಸ್ತುತ ಈ ಜಿಲ್ಲೆಗಳಲ್ಲಿ ಎಷ್ಟು ಪ್ರಜೆಗಳು ಹೊರ ರಾಜ್ಯದಲ್ಲಿ ಬಂದಂತಹ ಕೂಲಿ ರಾಜ್ಯದಿಂದ ಬಂದಂತಹ ಕೂಲಿ ಕಾರ್ಮಿಕರ ಬಗ್ಗೆ ತೋಟದ ಮಾಲೀಕರಿಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲು ತಿಳಿಸಲಾಗಿದೆಯೇ? | ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಾಫೀ ತೋಟದಲ್ಲಿ ಹೊರ ರಾಜ್ಯಗಳಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫೀ ತೋಟದಲ್ಲಿ ನೆಲೆಸಿರುವವರ ಬಗ್ಗೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ಹಾಗೂ ಎಲ್ಲಾ ಪೊಲೀಸ್ ಉಪಾಧೀಕ್ಷಕರ ನೇತೃತ್ವಗಳಲ್ಲಿ ಜಿಲ್ಲೆಯ ಎಲ್ಲಾ ಕಾಫೀ ತೋಟಗಳ ಮಾಲೀಕರಿಗೆ ಹಾಗೂ ಕಟ್ಟಡ ಗುತ್ತಿಗೆದಾರರಿಗೆ, ಹೋಟೆಲ್ ಲಾಡ್ಜ್ ಮಾಲೀಕರಿಗೆ, ಸೇರಿಸಿ ಅನ್ಯ ರಾಜ್ಯಗಳಿಂದ ರಾಜ್ಯಕ್ಕೆ ಬರುವ ವಲಸೆ ಕಾರ್ಮಿಕರ ಸಂಪೂರ್ಣ ಮಾಹಿತಿಯನ್ನು ಭಾವಚಿತ್ರದೊಂದಿಗೆ ಸಂಗ್ರಹಿಸಿ ಇಡುವಂತೆ ಸೂಕ್ತ ಸೂಚನೆಗಳನ್ನು ನೀಡಲಾಗಿರುತ್ತದೆ.<br>ಎಲ್ಲಾ ಕಾಫೀ ತೋಟಗಳಲ್ಲಿ ಮತ್ತು ಕಟ್ಟಡ ಗುತ್ತಿಗೆದಾರರು ಹೋಟೆಲ್ ಲಾಡ್ಜ್ ಮಾಲೀಕರು ತಮ್ಮಲ್ಲಿ ಅನ್ಯ ರಾಜ್ಯಗಳಿಂದ ಬರುವ ವಲಸೆ ಕಾರ್ಮಿಕರ ಮಾಹಿತಿಗಳನ್ನು ದಾಖಲಿಸಿ ಅವರ ಸೂಕ್ತ ಗುರುತಿನ ಚೀಟಿಗಳ ನಕಲುಗಳೊಂದಿಗೆ ನೋಂದಾಯಿಸಿ ರಿಜಿಸ್ಟರ್‌ಗಳನ್ನು ನಿರ್ವಹಿಸಲಾಗುತ್ತಿದೆ. |

**ಸಂಖ್ಯೆ: ಹೆಚ್ ಡಿ 87 ಪಿಎಂಎಸ್ 2026**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು